32

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ಇವರು ನಿಯಮ-72ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ

ಸೂಚನೆ:-

ಬೆಂಗಳೂರು ನಗರ ಜಿಲ್ಲೆ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಜಾಲ ಹೋಬಳಿಯಲ್ಲಿನ ನವರತ್ನ ಅಗ್ರಹಾರ, ಹುಣಸಮಾರನಹಳ್ಳಿ, ಕಾಡಗಾನಹಳ್ಳಿ, ಕುದುರೆಗೆರೆ, ಕಟ್ಟಿಗೇನಹಳ್ಳಿ, ತಿರುಮೇನಹಳ್ಳಿ, ಬೈಯಪ್ಪನಹಳ್ಳಿ ಹಾಗೂ ಬಾಗಲೂರು ಗ್ರಾಮಗಳಲ್ಲಿನ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಈ ಗ್ರಾಮಗಳ ಕೆಲವು ಸ.ನಂ.ಗಳು ಸರ್ಕಾರಿ ಆಸ್ತಿಯಾಗಿದ್ದರೂ ಸಹ ಇಲಾಖೆಯ ಅಧಿಕಾರಿಗಳು ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಹೇಳಿಕೆ:

1) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕಟ್ಟಿಗೇನಹಳ್ಳಿ ಗ್ರಾಮದ ಸ.ನಂ.28ಕ್ಕೆ ಸಂಬಂಧಿಸಿದಂತೆ :

ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕಟ್ಟಿಗೇನಹಳ್ಳಿ ಗ್ರಾಮದ ಸ.ನಂ.28ರ ಜಮೀನಿಗೆ ಸಂಬಂಧಿಸಿದಂತೆ ಒತ್ತುವರಿಯಾಗಿರುವ 6-05 ಗುಂಟೆ ಸರ್ಕಾರಿ ಜಮೀನನ್ನು ದಿನಾಂಕ 29.09.2023ರಂದು ಒತ್ತುವರಿ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿದೆ. ಮುಂದುವರೆದು, ಪ್ರಸ್ತುತ ಸ.ನಂ.28ರಲ್ಲಿ 2-00 ಎಕರೆ ಜಮೀನಿನ ಮಂಜೂರಾತಿಯನ್ನು ರದ್ದುಪಡಿಸಲು ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಪ್ರಕರಣದ ಸಂಖ್ಯೆ.ಆರ್.ಆರ್.ಟಿ.(ವೈ.ಎಲ್.ಕೆ)/ ಸಿ.ಆರ್/8/19-20 ದಿನಾಂಕ 29.01.2020ರ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ಮೇಲ್ಮನವಿ ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ:RD-LGX/264/2025, ದಿನಾಂಕ: 24.11.2025ರನ್ವಯ ಅನುಮತಿ ನೀಡಲಾಗಿದೆ. ಮುಂದುವರೆದು, ಸ.ನಂ.28ರ 4-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಶ್ರೀ ಮುನಿಕೆಂಪಣ್ಣ ಬಿನ್ ಪಿಳ್ಳಚನ್ನಪ್ಪ ರವರಿಗೆ ಮಂಜೂರಾಗಿರುವ ಬಾಬ್ತು ಯಾವುದೇ ದಾಖಲೆಗಳು ಲಭ್ಯವಿಲ್ಲದೆ ಇರುವುದರಿಂದ ಸರ್ಕಾರದ ಪರವಾಗಿ ಮಾನ್ಯ ಘನ ಉಚ್ಛ ನ್ಯಾಯಾಲಯದ ಪ್ರಕರಣ ಸಂ.ಡಬ್ಲ್ಯೂಎ 1468/2024 ಸಿ.ಡಬ್ಲ್ಯೂ.ಸಿ.ಸಿ.ನಂ.497/2024 ದಿನಾಂಕ 11.03.2025ರ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಡೈರಿ ನಂ.63603/2025ರಂತೆ ಪ್ರಕರಣ ದಾಖಲಿಸಲಾಗಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ 21.11.2025ರಂದು ಎಸ್.ಎಲ್.ಪಿ ಅನ್ನು ವಜಾಗೊಳಿಸಿ ಆದೇಶಿಸಿರುತ್ತದೆ. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಪ್ರಕರಣ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಾಗಿದ್ದು ವಿಚಾರಣಾ ಹಂತದಲ್ಲಿರುತ್ತದೆ.

2) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಹುಣಸಮಾರನಹಳ್ಳಿ ಗ್ರಾಮದ ಸ.ನಂ.179ಕ್ಕೆ ಸಂಬಂಧಿಸಿದಂತೆ :

ವಿಶೇಷ ಜಿಲ್ಲಾಧಿಕಾರಿಗಳು ಹೊರಡಿಸಿರುವ ಆದೇಶಗಳ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ WP No. 33313/2024, WP No.34008/2024, WP No. 33429/2024 ಮತ್ತು WP No.34916/2024 ರಂತೆ ಮಾನ್ಯ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಿಸಿದ್ದು, ಮಾನ್ಯ

ನ್ಯಾಯಾಲಯದ ವಿಚಾರಣಾ ಹಂತದಲ್ಲಿರುತ್ತದೆ ಮುಂದುವರಿದು. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಾಗಿದ್ದು, ವಿಚಾರಣಾ ಹಂತದಲ್ಲಿರುತ್ತದೆ.

3) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬಾಗಲೂರು ಗ್ರಾಮದ ಸ.ನಂ.175, ಹೊಸ ಸ.ನಂ.416ರ ಜಮೀನಿಗೆ ಸಂಬಂಧಿಸಿದಂತೆ :

ಮಾನ್ಯ ಉಚ್ಛ ನ್ಯಾಯಾಲಯದಲ್ಲಿ WA No 1149/2024. CCC No.251/2024. WP No.11566/2025 WP No.11460/2025 ರಂತೆ ಪ್ರಕರಣವನ್ನು ದಾಖಲಿಸಲಾಗಿದ್ದು, ಮಾನ್ಯ ನ್ಯಾಯಾಲಯದ ವಿಚಾರಣಾ ಹಂತದಲ್ಲಿದೆ

4) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕಾಡಿಗಾನಹಳ್ಳಿ ಗ್ರಾಮದ ಸ.ನಂ.23ರ ಜಮೀನಿಗೆ ಸಂಬಂಧಿಸಿದಂತೆ :

ಪ್ರಸ್ತುತ ಸ.ನಂ.ನಲ್ಲಿ 2-30 ಗುಂಟೆ ಸರ್ಕಾರಿ ಜಮೀನೆಂದು ಗುರುತಿಸಿದ್ದು, ಅದಕ್ಕೆ ಸರ್ಕಾರವೆಂದು ನಾಮಫಲಕ ಆಳವಡಿಸಲಾಗಿರುತ್ತದೆ. ಈ ಒಟ್ಟು ವಿಸ್ತೀರ್ಣದ ಪೈಕಿ ಹೊಸ ಸರ್ವೆ ನಂ.96 ಕ್ಕೆ 1-00 ಎಕರೆ ಜಮೀನು ದುರಸ್ತಿಗೆ ಒಳಪಡಿಸಿದ್ದು, ಉಳಿಕೆ 1-00 ಎಕರೆ ಜಮೀನನ್ನು ಅರ್ಹ ಫಲಾನುಭವಿಗಳಿಗೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರು ಮಾಡಲು ರಾಜೀವ್ ಗಾಂದಿ ವಸತಿ ನಿಗಮ ನಿಯಮಿತರವರಿಗೆ ಹಸ್ತಾಂತರಿಸಲಾಗಿದ್ದು, ಉಳಿಕೆ 0-30 ಗುಂಟೆ ವಿಸ್ತೀರ್ಣದ ಬಗ್ಗೆ 94ಸಿಸಿ ರಡಿಯಲ್ಲಿ ಅರ್ಹ ಫಲಾನುಭವಿಗಳು ಕಟ್ಟಿರುವ ವಾಸದ ಮನೆಗಳಿಗೆ ಅನುಮತಿ ಕೋರಿದ್ದು, ಪ್ರಕರಣ ಪ್ರಗತಿಯಲ್ಲಿರುತ್ತದೆ ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಾಗಿದ್ದು ವಿಚಾರಣಾ ಹಂತದಲ್ಲಿರುತ್ತದೆ.

5) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬೈಯ್ಯಪ್ಪನಹಳ್ಳಿ ಗ್ರಾಮದ ಸ.ನಂ.80ರ ಜಮೀನಿಗೆ ಸಂಬಂಧಿಸಿದಂತೆ :

ಪ್ರಸ್ತುತ ಜಮೀನಿಗೆ ಸಂಬಂಧಿಸಿದಂತೆ, ಹಿಂದೆ ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣಗೊಳಿಸುವ ಸಮಿತಿಯಲ್ಲಿ ಮಂಜೂರಾಗಿರುವ ಜಮೀನಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಇವರ ವಿಚಾರಣಾ ವರದಿಯನ್ವಯ ಸರ್ಕಾರವು ದರಖಾಸ್ತು ಪೋಡಿಯಂತೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ ರವರು ಹೊರಡಿಸಿರುವ ಅಧಿಕೃತ ಜ್ಞಾಪನಕ್ಕೆ ತಡೆಯಾಜ್ಞೆ ನೀಡಿದ್ದು, ಸರ್ಕಾರವು ಈ ಸದರಿ ಸ.ನಂ. ವಿರುದ್ಧ ಮಾನ್ಯ ಘನ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವಂತೆ ನಡವಳಿಯಲ್ಲಿ ಪ್ರಸ್ತಾಪಿಸಲಾಗಿದ್ದು ಅದರಂತೆ ಮುಂದಿನ ನಡವಳಿಕೆ ಕ್ರಮ ವಹಿಸಲಾಗಿರುತ್ತದೆ. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಾಗಿದ್ದು ವಿಚಾರಣಾ ಹಂತದಲ್ಲಿರುತ್ತದೆ.

6) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ನವರತ್ನ ಅಗ್ರಹಾರ ಗ್ರಾಮದ ಸ.ನಂ.3, 13, 67ರ ಜಮೀನಿಗೆ ಸಂಬಂಧಿಸಿದಂತೆ :

ಪ್ರಸ್ತುತ ಜಮೀನು ಮೂಲತ: ಇನಾಂ ಜಮೀನಾಗಿದ್ದು, ಇನಾಂ ರದ್ದಿಯಾತಿ ಕಾಯ್ದೆ 1954ರಡಿಯಲ್ಲಿ ಫಲಾನುಭವಿಗಳಿಗೆ ಮರು ಮಂಜೂರಾತಿ ಮಾಡಿರುವ ವಿರುದ್ಧ ಪ್ರಕರಣವು ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಮುಂದೆ ಬಂದಿದ್ದು, ಸಮಿತಿಯು ಪ್ರಸ್ತುತ ಜಮೀನನ್ನು ಸ್ಥಳ ತನಿಖೆ ನಡೆಸಿದ್ದು, ಸಮಿತಿಯಲ್ಲಿ ಪ್ರಕರಣ ತೀರ್ಮಾನಕ್ಕಾಗಿ ಬಾಕಿ ಇರುತ್ತದೆ. ಸದರಿ ಗ್ರಾಮದ ಜಮೀನುಗಳಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಾಗಿದ್ದು ವಿಚಾರಣಾ ಹಂತದಲ್ಲಿರುತ್ತದೆ.

7) ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಕುದುರೆಗೆರೆ ಗ್ರಾಮದ ಸರ್ವೆ ನಂ.50, 55, 59 ರ ಜಮೀನುಗಳಿಗೆ ಸಂಬಂಧಿಸಿದಂತೆ :

ಸದರಿ ಜಮೀನಿಗೆ ಸಂಬಂಧಿಸಿದಂತೆ, ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಸಂಖ್ಯೆ:ಎಲ್.ಜಿ.ಸಿ(ಎಸ್)267/2023 ರಂತೆ ಪ್ರಕರಣ ದಾಖಲಾಗಿದ್ದು ವಿಚಾರಣಾ ಹಂತದಲ್ಲಿರುತ್ತದೆ.

ಸಂಖ್ಯೆ: ಆರ್‌ಡಿ 9 ಎಲ್‌ಜಿಕ್ಯೂ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು